ಕರ್ನಾಟಕ ಸರ್ಕಾರ
Government of Karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಡಿ ಎಸ್ ಇ ಆರ್ ಟಿ
DSERT
DEPARTMENT OF STATE EDUCATIONAL RESEARCH AND TRAINING
NO 4, 100 FT RING ROAD, BANASHANKARI 3RD STAGE BENGALURU - 085
Email: dsert.kar@nic.in Website : http://dsert.kar.nic.in
Phone : 080 26422372 26422373 26422374
Fax:26422377

ಸಂಖ್ಯೆ: ರಾವಿಸಂ(1)./ವಿ.ಕಾ/ವಿ.ವಿ.ಗೋ/06/2015-16. ದಿನಾಂಕ: 01/06/2015

## ಸುತ್ತೋಲೆ

ವಿಷಯ:- 2015-16 ನೇ ಸಾಲಿನಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ವಿಜ್ಞಾನ ವಿಚಾರ ಗೋಷ್ಠಿ ಆಯೋಜಿಸುವ ಕುರಿತು.

ಉಲ್ಲೇಖ:- 1) ಸರ್ಕಾರದ ಆದೇಶ ಸಂಖ್ಯೆ : ಇಡಿ: 132 ಯೋಯೋಕ 2015 ದಿ:8/5/15
2) ವಿ.ಐ.ಟಿ.ಎಂ. ಬೆಂಗಳೂರು ಇವರ ಪತ್ರಸಂಖ್ಯೆ: No.VM 24(18) /EDEXT /NSS-2015/314 ದಿನಾಂಕ: 20.04.2015.

*********

ಡಿ.ಎಸ್.ಇ.ಆರ್.ಟಿ ಯ ರಾಜ್ಯ ವಿಜ್ಞಾನ ಸಂಸ್ಥೆಯ ಮುಖೇನ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವ ವಿಜ್ಞಾನಕ್ಕೆ ಸಂಬಂಧಿಸಿದ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. 2015-16 ನೇ ಸಾಲಿನಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ವಿಜ್ಞಾನ ವಿಚಾರ ಗೋಷ್ಠಿಯನ್ನು National Council Of Science Museums Kolkatta, ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯ, ಬೆಂಗಳೂರು ಇವರ ಸಹಯೋಗದೊಂದಿಗೆ ಏರ್ಪಡಿಸಲಾಗಿದೆ.

### ವಿಜ್ಞಾನ ವಿಚಾರ ಗೋಷ್ಠಿಯ ಮುಖ್ಯ ಉದ್ದೇಶಗಳು:

- ಯುವ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಅನ್ವೇಷಣೆ ಮತ್ತು ವಿಶ್ಲೇಷಣಾತ್ಮಕ ಪ್ರವೃತ್ತಿಯನ್ನು ಜಾಗೃತಗೊಳಿಸುವುದು.
- ಅರಳುತ್ತಿರುವ ವಿಜ್ಞಾನಿಗಳಿಗೆ ವಿಚಾರ ವಿನಿಮಯಕ್ಕೆ ವೇದಿಕೆ ಸೃಷ್ಟಿಸುವುದು.
- ದೇಶದ ಎಲ್ಲಾ ಯುವ ಪ್ರತಿಭೆಗಳಲ್ಲಿ ರಾಷ್ಟ್ರೀಯ ಏಕತೆಯ ಭಾವನೆ ಬೆಳೆಸುವುದು.

### ವಿಜ್ಞಾನ ವಿಚಾರ ಗೋಷ್ಠಿಯ ವಿಷಯ :-

***" Harnessing Light: Possibilities and challenges"***
***"ಬೆಳಕಿನ ಉಪಯೋಗಗಳು; ಸಾಧ್ಯತೆಗಳು ಮತ್ತು ಸವಾಲುಗಳು"***

**ವಿದ್ಯಾರ್ಥಿಗಳಿಗೆ ಭಾಗವಹಿಸುವ ಅರ್ಹತೆ:**

ರಾಜ್ಯದಲ್ಲಿ ಸರ್ಕಾರಿ, ಅನುದಾನಿತ, ಅನುದಾನ ರಹಿತ ಹಾಗೂ ಮಾನ್ಯತೆ ಪಡೆದ ಎಲ್ಲಾ ಪ್ರೌಢಶಾಲೆಗಳಲ್ಲಿ 8 ರಿಂದ 10 ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು.

### ವಿಚಾರಗೋಷ್ಠಿಯ ನಿಬಂಧನೆಗಳು:

**ಭಾಷೆ** : ಕನ್ನಡ/ ಹಿಂದಿ/ ಆಂಗ್ಲ/ ಮಾನ್ಯತೆ ಪಡೆದ ಯಾವುದೇ ಭಾರತೀಯ ಭಾಷೆ

**ಕಾಲಾವಧಿ** : ವಿಷಯ ಮಂಡನೆಗೆ 6 ನಿಮಿಷಗಳು, ತೀರ್ಪುಗಾರರರ ಪ್ರಶ್ನೋತ್ತರ 2 ನಿಮಿಷಗಳು
ಒಟ್ಟು - 8 ನಿಮಿಷಗಳು

**ವಿಧಾನ** : ಗೋಷ್ಠಿಗೂ ಮುನ್ನ 20 ಪ್ರಶ್ನೆಗಳ 20 ಅಂಕಗಳ ಲಿಖಿತ ಪರೀಕ್ಷೆ - ಅವಧಿ 20 ನಿಮಿಷಗಳು. ಪ್ರಸ್ತುತಿ ನಂತರ ನಿರ್ಣಾಯಕರು ಕೇಳುವ 3 ಪ್ರಶ್ನೆಗಳಲ್ಲಿ ಕನಿಷ್ಠ 2 ಕ್ಕೆ 2 ನಿಮಿಷಗಳಲ್ಲಿ ಉತ್ತರಿಸುವುದು.

**ಅಂಕಗಳ ವಿವರ:**

| | |
|---|---|
| ವಿಷಯದಲ್ಲಿನ ವೈಜ್ಞಾನಿಕ ಅಂಶಗಳು<br>Scientific content in the presentation | 40 marks |
| ಪ್ರಸ್ತುತಿಯಲ್ಲಿನ ನಿರರ್ಗಳತೆ<br>Fluency In Speech | 25 marks |
| ಲಿಖಿತ ಪರೀಕ್ಷೆ 20 ನಿಮಿಷಗಳಲ್ಲಿ 20 ಪ್ರಶ್ನೆಗಳನ್ನು ಉತ್ತರಿಸುವ ಸಾಮರ್ಥ್ಯ,<br>Ability to Answer 20 questions in 20 Min. in written Aptitude test | 10 marks |
| ಮೌಖಿಕವಾಗಿ ಉತ್ತರಿಸುವ ಕೌಶಲ<br>Answer to Oral Questions on spot After presentation | 10 marks |
| ದೃಶ್ಯೋಪಕರಣಗಳನ್ನು ಬಳಸುವಲ್ಲಿ ನಾವೀನ್ಯತೆ<br>Novelty in Use of Visuals | 15 marks |
| TOTAL | 100 Marks |

**ದೃಶ್ಯೋಪಕರಣಗಳ ಬಳಕೆ:**

ವಿಷಯ ಮಂಡನೆ ಸಮಯದಲ್ಲಿ ಒಬ್ಬ ಸ್ಪರ್ಧಿಯು ಬಳಸಬಹುದಾದ ಗರಿಷ್ಠ ದೃಶ್ಯೋಪಕರಣ/ ಸ್ಲೈಡ್ /ಚಾರ್ಟ್ ಇತ್ಯಾದಿಗಳ ಸಂಖ್ಯೆ 5 ಮಾತ್ರ (ಎಲ್ಲಾ ಸೇರಿದಂತೆ). ವಿವರಗಳು ಈ ಕೆಳಗಿನಂತಿವೆ.

1) ಚಾರ್ಟ್ /ಪೋಸ್ಟರ್ಸ್– ಗರಿಷ್ಟ 850 mm X 600 mm ಎತ್ತರ ಇವುಗಳನ್ನು ಕ್ಯಾಲೆಂಡರ್ ಮಾದರಿಯಲ್ಲಿ ಹಾಕಿ ಪ್ರದರ್ಶಿಸಬೇಕು– ಒಂದರ ನಂತರ ಒಂದನ್ನು ಪ್ರದರ್ಶಿಸಬೇಕು. ಅಥವಾ
2) 35 ಮಿ.ಮಿ.ಅಳತೆ ಪ್ಲಾಸ್ಟಿಕ್ ಫ್ರೇಮ್ ಮೇಲೆ ಅಳವಡಿಸಿರುವ ಸ್ಲೈಡ್ ನ ಬಳಕೆ. ಅಥವಾ
3) ಎ4 ಅಳತೆಗಿಂತ ಹೆಚ್ಚಿರದ ಒ.ಎಚ್.ಪಿ ಸ್ಲೈಡ್‌ಗಳು ಅಥವಾ
4) ಕಂಪ್ಯೂಟರ್ ಆಧಾರಿತ ಸ್ಲೈಡ್‌ಗಳ ಪ್ರದರ್ಶನ. (Office-2007 PPSX & PPTX Format) ಇದಕ್ಕೆ ಪೂರಕ ಅಂಶಗಳನ್ನು ಸೇರಿಸಬಾರದು. ಉದಾ:– ಅನಿಮೇಷನ್, pop – ups, roll – overs ಇರದಂತೆ interactions ಇರದಂತೆ

ಸೂಚನೆ: **3D ಮಾದರಿ/ವೀಡಿಯೋ ಗಳಿಗೆ ಅವಕಾಶವಿರುವುದಿಲ್ಲ.**

## ವಿವಿಧ ಹಂತಗಳಲ್ಲಿ ವಿಚಾರ ಗೋಷ್ಠಿಯ ಆಯೋಜನೆಗೆ ವೇಳಾಪಟ್ಟಿ:

| ಕ್ರ.ಸಂ | ಹಂತ | ನಿಗದಿತ ದಿನಾಂಕ |
|---|---|---|
| 1 | ಶಾಲಾ | 14 ಜುಲೈ 2015 ರೊಳಗೆ |
| 2 | ತಾಲ್ಲೂಕು | 30 ಜುಲೈ 2015 ರೊಳಗೆ |
| 3 | ಜಿಲ್ಲೆ | 14 ಆಗಸ್ಟ್ 2015 ರೊಳಗೆ * **ಜಿಲ್ಲಾ ಹಂತದಲ್ಲಿ ಕನಿಷ್ಠ 15 ಸ್ಪರ್ಧಿಗಳಿರಬೇಕು.**<br>ಉದಾ:ಬ್ಲಾಕ್‌ಗಳಿದ್ದಲ್ಲಿ ಪ್ರತಿ ಬ್ಲಾಕ್‌ನಿಂದ ಕನಿಷ್ಠ ಸ್ಪರ್ಧಿಗಳಿರಬೇಕು |
| 4 | ರಾಜ್ಯ | 03 ಸೆಪ್ಟಂಬರ್ 2015 ರೊಳಗೆ<br>**ಪ್ರತಿ ಶೈಕ್ಷಣಿಕ ಜಿಲ್ಲೆಯಿಂದ ಪ್ರಥಮ ಸ್ಥಾನ ಪಡೆದ ಸ್ಪರ್ಧಿ ರಾಜ್ಯ ಹಂತದಲ್ಲಿ ಭಾಗವಹಿಸುವರು** |
| 5 | ರಾಷ್ಟ್ರ | 08 ಅಕ್ಟೋಬರ್ 2015 ರಂದು National Science Centre, Near Gate #1, Pragathi Maidan ,New Delhi (ರಾಜ್ಯ ಹಂತದಲ್ಲಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿ/ನಿ ರಾಷ್ಟ್ರ ಹಂತದಲ್ಲಿ ರಾಜ್ಯವನ್ನು ಪ್ರತಿನಿಧಿಸಲಿದ್ದಾರೆ.) |

ಬ್ಲಾಕ್ ಹಾಗೂ ಜಿಲ್ಲಾ ಹಂತದ ಕಾರ್ಯಕ್ರಮವನ್ನು ಡಯಟ್‌ನ ಪ್ರಾಂಶುಪಾಲರು ಆಯೋಜಿಸಬೇಕಿದ್ದು, ಎರಡನೇ ತ್ರೈಮಾಸಿಕದಲ್ಲಿ ಅನುದಾನವನ್ನು ಅಪ್‌ಲೋಡ್ ಮಾಡಲಾಗುವುದು. ಅಗತ್ಯವಿದ್ದಲ್ಲಿ ಲಭ್ಯವಿರುವ ಅನುದಾನವನ್ನು ಮರುಹೊಂದಾಣಿಕೆ ಮಾಡಿಕೊಳ್ಳುವ ಷರತ್ತಿನೊಂದಿಗೆ ಬಳಸಿಕೊಳ್ಳಲು ಅನುಮತಿಸಿದೆ.ತಾಲ್ಲೂಕು ಹಂತದ ಕಾರ್ಯಕ್ರಮವನ್ನು ಆಯಾ ತಾಲ್ಲೂಕಿನ ಡಯಟ್ ನೋಡಲ್ ಅಧಿಕಾರಿಗಳ ನೇತೃತ್ವದಲ್ಲಿಯೇ ಆಯೋಜಿಸುವುದು.

**ಕಾರ್ಯಕ್ರಮದ ಆಯೋಜನೆಗೆ ವಹಿಸಬೇಕಾದ ಕ್ರಮಗಳು:**

- ವಿಚಾರ ಗೋಷ್ಠಿಯ ವಿಷಯವನ್ನು ಸಾಕಷ್ಟು ಮುಂಚಿತವಾಗಿಯೇ ಜಿಲ್ಲೆಯ ಎಲ್ಲಾ ಪ್ರೌಢಶಾಲೆಗಳ ವಿದ್ಯಾರ್ಥಿಗಳಿಗೆ ತಿಳಿಯುವಂತೆ ಅಗತ್ಯ ಪ್ರಚಾರ ಮತ್ತು ಮಾಹಿತಿಯನ್ನು ನೀಡುವುದು.
- ಬ್ಲಾಕ್ ನ ಎಲ್ಲಾ ಶಾಲೆಗಳಲ್ಲಿ ಕಾರ್ಯಕ್ರಮ ಶಾಲಾ ಹಂತದಲ್ಲಿ ಕಡ್ಡಾಯವಾಗಿ ಆಯೋಜಿಸಲು ಕ್ರಮ ವಹಿಸುವುದು- ನಮೂನೆ 1 ರಲ್ಲಿರುವಂತೆ ಮಾಹಿತಿಗಳನ್ನು ಭರ್ತಿ ಮಾಡಿ ಬ್ಲಾಕ್ ಮತ್ತು ಜಿಲ್ಲಾ ಹಂತದಲ್ಲಿ ಅಂಕಿ ಅಂಶಗಳನ್ನು ಕ್ರೋಢೀಕರಣ ಮಾಡಿ ಮಾಹಿತಿಯನ್ನು ಡಿ.ಎಸ್.ಇ.ಆರ್.ಟಿ ಗೆ ಸಲ್ಲಿಸುವುದು.
- ಎಲ್ಲಾ ಹಂತದಲ್ಲಿ ವಿಷಯ ಜ್ಞಾನವುಳ್ಳ ಸಂಪನ್ಮೂಲ ವ್ಯಕ್ತಿಗಳನ್ನೇ ಆಯ್ಕೆ ಮಾಡಿಕೊಳ್ಳುವುದು.
- ಡಯಟ್‌ನ ಅಧಿಕಾರಗಳು, ಬಿ.ಆರ್.ಪಿ, ಇ.ಸಿ.ಓ ತೀರ್ಪುಗಾರರಾಗಿದ್ದಲ್ಲಿ ಯಾವುದೇ ಸಂಭಾವನೆ ಪಡೆಯುವಂತಿಲ್ಲ.

**ಅನುದಾನದ ವಿವರ** :

ಬ್ಲಾಕ್ ಹಂತದ ಕಾರ್ಯಕ್ರಮಕ್ಕೆ ರೂ 2000/- ಗಳನ್ನು Catalytic ಮೊತ್ತವಾಗಿ ಬಿಡುಗಡೆ ಮಾಡಲಾಗುತ್ತಿದ್ದು, ಈ ಮೊತ್ತದಲ್ಲಿ ಸ್ಪರ್ಧಿಗಳಿಗೆ ಪ್ರೋತ್ಸಾಹದಾಯಕ ಬಹುಮಾನ/ ಪ್ರಶಸ್ತಿ ಪತ್ರಗಳನ್ನುನೀಡಲು ಮತ್ತು ತೀರ್ಪುಗಾರರ ಸಂಭಾವನೆಗೆ ಬಳಸಬಹುದಾಗಿದೆ.

ಜಿಲ್ಲಾ ಹಂತದ ಕಾರ್ಯಕ್ರಮಕ್ಕೆ ರೂ 9,000/-ಗಳನ್ನು ಬಿಡುಗಡೆ ಮಾಡಲಾಗುವುದು. ಸದರಿ ಮೊತ್ತದಲ್ಲಿ ಈ ಕೆಳಕಂಡ ವೆಚ್ಚಗಳನ್ನು ಭರಿಸುವುದು.

| ಕ್ರ.ಸಂ. | **ಖರ್ಚಿನ ವಿವರ** | | **ಮೊತ್ತ ರೂ** |
|---|---|---|---|
| 1 | ಬಹುಮಾನಗಳ ವಿವರ: | ಪ್ರಥಮ:<br>ದ್ವಿತೀಯ:<br>ತೃತೀಯ:<br>**ಒಟ್ಟು** | 750-00<br>500-00<br>350-00<br>**1600-00** |
| 2 | ತೀರ್ಪುಗಾರರ ಸಂಭಾವನೆ: | 300X 3 | **900-00** |
| 3 | ಟೈಮ್ ಕೀಪರ್ ಸಂಭಾವನೆ, ಲಘು ಉಪಹಾರ ಮತ್ತು ಕಾಫಿ /ಟೀ, ಸ್ಪರ್ಧಿಗಳಿಗೆ ಮತ್ತು ಮಾರ್ಗದರ್ಶಿ ಶಿಕ್ಷಕರಿಗೆ ಟಿ.ಎ.(ಡಿ.ಎ ಇರುವುದಿಲ್ಲ). ಆಯೋಜನಾ ವೆಚ್ಚ | | **6500-00** |
| | **ಒಟ್ಟು** | | **ರೂ. 9000-00** |

ದಿನಾಂಕ: **20/08/2015** ರ ಒಳಗಾಗಿ ಜಿಲ್ಲಾ ಹಂತದ ವಿಚಾರ ಗೋಷ್ಠಿಯ ಈ ಕೆಳಕಂಡ ಮಾಹಿತಿಗಳನ್ನು ಡಿ.ಎಸ್.ಇ.ಆರ್.ಟಿ ಗೆ. ಇಮೇಲ್ sis.dsert-ka@nic.in ಮತ್ತು ಟಪಾಲಿನ ಮೂಲಕ ಸಲ್ಲಿಸುವುದು.

1. Photo ಸಹಿತ ಕಾರ್ಯಕ್ರಮದ ವರದಿ,
2. ನಮೂನೆ 1 ರ ಕ್ರೋಢೀಕೃತ ಮಾಹಿತಿ
3. ನಮೂನೆ 2 ,3ಮತ್ತು 4 ರಲ್ಲಿನ ಮಾಹಿತಿ:

ಸಹಿ/-
ನಿರ್ದೇಶಕರು
ರಾಜ್ಯ ಶಿಕ್ಷಣ ಸಂಶೋಧನೆ & ತರಬೇತಿ ಇಲಾಖೆ
ಬೆಂಗಳೂರು 560 085

ಗೆ,

ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರಿಗೆ.

ಪ್ರತಿಯನ್ನು:

1) ರಾಜ್ಯದ ಎಲ್ಲಾ ಸಿ.ಟಿ.ಇ ಪ್ರಾಂಶುಪಾಲರಿಗೆ. ಇವರಿಗೆ ಮಾಹಿತಿಗಾಗಿ
2) ರಾಜ್ಯದ ಎಲ್ಲಾ ಉಪನಿರ್ದೇಶಕರು (ಆ) ಸಾ.ಶಿ.ಇ ಇವರಿಗೆ ಅಗತ್ಯ ಕ್ರಮಕ್ಕೆ
3) ವಿ.ಐ.ಟಿ.ಎಂ. ಬೆಂಗಳೂರು ಇವರಿಗೆ ಮಾಹಿತಿಗಾಗಿ
4) ಕಚೇರಿ ಪ್ರತಿ

**ನಮೂನೆ-1**

| ಶಾಲೆಯ ಹೆಸರು | ಕಾರ್ಯಕ್ರಮ ಆಯೋಜಿಸಿದ ದಿನಾಂಕ | ಭಾಗವಹಿಸಿದವರ ಸಂಖ್ಯೆ | | | ಭಾಗವಹಿಸಿದ ಪ್ರೇಕ್ಷಕರ ಸಂಖ್ಯೆ | | |
|---|---|---|---|---|---|---|---|
| | | ಗಂ | ಹೆ | ಒಟ್ಟು | ಶಿಕ್ಷಕರು | ವಿದ್ಯಾರ್ಥಿಗಳು | ಒಟ್ಟು |
| | | | | | | | |

**ನಮೂನೆ-2**

| ಜಿಲ್ಲೆಯ ಹೆಸರು | ಕಾರ್ಯಕ್ರಮ ಆಯೋಜಿಸಿದ ಸ್ಥಳ ಮತ್ತು ದಿನಾಂಕ | ಭಾಗವಹಿಸಿದವರ ಸಂಖ್ಯೆ | | | ಭಾಗವಹಿಸಿದ ಪ್ರೇಕ್ಷಕರ ಸಂಖ್ಯೆ | | |
|---|---|---|---|---|---|---|---|
| | | ಗಂ | ಹೆ | ಒಟ್ಟು | ಶಿಕ್ಷಕರು | ವಿದ್ಯಾರ್ಥಿಗಳು | ಒಟ್ಟು |
| | | | | | | | |

**ನಮೂನೆ-3**

| ಜಿಲ್ಲೆಯ ಹೆಸರು | ಜಿಲ್ಲಾ ಹಂತದ ಗೋಷ್ಠಿಯಲ್ಲಿ ಪ್ರಥಮ ಸ್ಥಾನ ಪಡೆದವರ ವಿವರಗಳು | | | | ಷರಾ |
|---|---|---|---|---|---|
| | ವಿದ್ಯಾರ್ಥಿ/ನಿ ಹೆಸರು | ಶಾಲೆಯ ಹೆಸರು ಮತ್ತು ವಿಳಾಸ | ಮೊಬೈಲ್ ಸಂಖ್ಯೆ | ಮಂಡನೆಯಲ್ಲಿ ಉಪಯೋಗಿಸಲಿರುವ ದೃಶ್ಯೋಪಕರಣಗಳು | |
| | | | | | |

**ನಮೂನೆ 4**

| ಜಿಲ್ಲೆಯ ಹೆಸರು | ಜಿಲ್ಲಾ ಹಂತದ ವಿ.ವಿ ಗೋಷ್ಠಿಯ ತೀರ್ಪುಗಾರರ ಹೆಸರು | ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆ ಮತ್ತು ಹುದ್ದೆ | ತೀರ್ಪುಗಾರರ ಸಹಿ |
|---|---|---|---|
| | 1 | | |
| | 2 | | |
| | 3 | | |